**ಕಾರ್ಮಿಕ ನ್ಯಾಯಾಲಯ, ಮೈಸೂರು.**

**Ref**: 29/2021

ಡಬ್ಲ್ಯೂ. ಡಬ್ಲ್ಯೂ-6

**ದಿನಾಂಕ 24.11.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು**

**ಮುಂದುವರೆದ ಮುಖ್ಯ ವಿಚಾರಣೆಃ 1 ನೇ ಪಕ್ಷಗಾರರ ಪರ ಅವರ ಅಧಿಕೃತ ಪ್ರತಿನಿಧಿಯಾದ ಶ್ರೀ.ಎಲ್.ಎಂ.ಪಿ ರವರಿಂದ:**

1. Copy of the representation dated 16.08.2019 addressed to turned hostile Joint Commissioner, Labour, Tirupathi by the workmen who had reported for work about their safety.

2. Copy of the Representation dated 04-09-2018 addressed to the management of the Second Party by the workmen who had reported for work about their safety along with postal receipt.

3. Copy of the Representation dated 21-09-2018 addressed to the management of the Second Party, along with 3 courier receipts, by the workmen who had reported for work about their safety and on undertaking demanded by the Second Party management with the copy marked to concerned authorities.

4. Copy of the Representation dated 23-09-2018 addressed to the management of the Second Party, along with courier receipt, by the workmen who had reported for work about their work attendance from 17-09-2018 to 22-09-2019 by marking copy to the concerned authorities.

5.Copy of the Representation dated 23-09-2018 addressed to the management of the Second Party, by the workmen who had reported for

work about their work attendance from 17–09–2018 to 22–09–2019 with acknowledgment by the DCL, Tirupathi.

6.Copy of the Representation dated 25–09–2018 addressed to the DCL, Tirupathi, by the workmen who had reported for work about continued refusal of work by the Second Party and unfair treatment by the Second Party.

7. Copy of the Representation dated 28–09–2018 addressed to the Deputy Labour Commissioner, Bengaluru, with courier receipt, by the workmen who had reported for work at Vikruthamala, about the unfair treatment caused by the Second Party and false allegations levelled against the leaders of the First Party workmen.

8. Copy of the Representation dated 28–09–2018 addressed to Shri.Narendra, Managing Director, with courier receipt, by the workmen who had reported for work at Vikruthamala, about the unfair treatment caused by the Second Party and false allegations levelled against the leaders of the First Party workmen.

9. Copy of the Representation dated 28–09–2018 addressed to Shri. Raghevendra, Director, with courier receipt, by the workmen who had reported for work at Vikruthamala, about the unfair treatment caused by the Second Party and false allegations levelled against the leaders of the First Party workmen

10. Copy of the Representation dated 28–09–2018 addressed to ALC, Mysuru, with courier receipt, by the workmen who had reported for work at Vikruthamala, about the unfair treatment caused by the Second Party and false allegations levelled against the leaders of the First Party workmen.

11. Copy of the Representation dated 28–09–2018 addressed to Deputy Commissioner, Mysuru, with courier receipt, by the workmen who had reported for work at Vikruthamala, about the unfair treatment caused by the Second Party and false allegations levelled against the leaders of the First Party workmen.

12. Copy of the Representation dated 03–10–2018 addressed to ALC, Mysuru, with courier receipt, by the workmen who had reported for work at Vikruthamala, about the unfair treatment, refusal to provide work by the Second Party and about their reporting of work on 08–10–2018 at Mysuru Plant, if the Second Party continues to refuse work to them

13. Copy of the Representation dated 03–10–2018 addressed to the Management of the Second Party, with courier receipt, by the workmen who had reported for work at Vikruthamala, about the unfair treatment, refusal to provide work by the Second Party and about their reporting of work on 08–10–2018 at Mysuru Plant, if the Second Party continues to refuse work to them

14. Copy of the Representation dated 03–10–2018 addressed to the DLC, Region–2, Bengaluru, with courier receipt, by the workmen who had reported for work at Vikruthamala, about the unfair treatment, refusal to provide work by the Second Party and about their reporting of work on 08–10–2018 at Mysuru Plant, if the Second Party continues to refuse work to them

15. Copy of the Representation dated 05–10–2018 addressed to the DCL, Tirupathi, by the workmen who had reported for work at Vikruthamala, about the unfair treatment, refusal to provide work by the Second Party and about their reporting of work on 08– 10–2018 at Mysuru Plant, if the Second

Party continues to refuse work to them and requesting the DCL, Tirupathi, to visit the plant on 06–10–2018 to take stalk of the situation.

16. Copy of the Representation dated 03–10–2018 addressed to the DLC, Region–2, Bengaluru, with courier receipt dated 07–10–2018, by the workmen who had reported for work at Vikruthamala, about the unfair treatment, refusal to provide work by the Second Party and about their reporting of work on 08– 10–2018 at Mysuru Plant, if the Second Party continues to refuse work to them

17. Copy of the Representation dated 06–10–2018 addressed to the deputy Director of Factories, by the First Party Union, about the unfair treatment, refusal to provide work by the Second Party and about their reporting of work on 08–10–2018 at Mysuru Plant, if the Second Party continues to refuse work to them and to consider their reporting as official attendance.

18. Copy of the Representation dated 08–10–2018 addressed to the management of the Second Party about their reporting of work on 08–10–2018 at Mysuru Plant with acknowledgment from Deputy Director of Factories, Mysore.

19. Copy of the Representation dated 08–10–2018 addressed to the management of the Second Party about their reporting of work on 08–10–2018 at Mysuru Plant with acknowledgment from Deputy Commissioner, Mysore

20. Copy of the Representation dated 08–10–2018 addressed to the management of the Second Party about their reporting of work on 08–10–2018 at Mysuru Plant with acknowledgment from Assistant Labour Commissioner, Mysore

21. Copy of the Representation dated 09–10–2018 addressed to the management of the Second Party about their reporting of work on 09–10–2018 at Mysuru Plant with acknowledgment from Deputy Commissioner, Mysore

22. Copy of the Representation dated 09–10–2018 addressed to the management of the Second Party about their reporting of work on 09–10–2018 at Mysuru Plant with acknowledgment from Assistant Labour Commissioner, Mysore

23. Copy of the Representation dated 10–10–2018 addressed to the management of the Second Party about their reporting of work on 10–10–2018 at Mysuru Plant with acknowledgment from Assistant Labour Commissioner, Mysore

24. Copy of the Representation dated 10–10–2018 addressed to the management of the Second Party about their reporting of work on 10–10–2018 at Mysuru Plant with acknowledgment from Deputy Commissioner, Mysore

25. Copy of the Representation dated 11–10–2018 addressed to the management of the Second Party about their reporting of work on 11–10–2018 at Mysuru Plant with acknowledgment from Deputy Commissioner, Mysore

26. Copy of the Representation dated 11–10–2018 addressed to the management of the Second Party about their reporting of work on 11–10–2018 at Mysuru Plant with acknowledgment from Assistant Labour Commissioner, Mysore

27. Copy of the Representation dated 12-10-2018 addressed to the management of the Second Party about their reporting of work on 12-10-2018 at Mysuru Plant with acknowledgment from Deputy Commissioner, Mysore

28. Copy of the Representation dated 12-10-2018 addressed to the management of the Second Party about their reporting of work on 12-10-2018 at Mysuru Plant with acknowledgment from Assistant Labour Commissioner, Mysore

29. Copy of the Representation dated 12-10-2018 addressed to the management of the Second Party about their reporting of work on 12-10-2018 at Mysuru Plant with acknowledgment from Deputy Director of Factories, Mysore

30. Copy of the Representation dated 13-10-2018 addressed to the management of the Second Party about their reporting of work on 13-10-2018 at Mysuru Plant with acknowledgment from Assistant Labour Commissioner, Mysore

31. Copy of the Representation dated 13-10-2018 addressed to the management of the Second Party about their reporting of work on 13-10-2018 at Mysuru Plant with acknowledgment from Deputy Commissioner, Mysore

32. Copy of the Representation dated 13-10-2018 addressed to the management of the Second Party about their reporting of work on 13-10-2018 at Mysuru Plant with acknowledgment from Deputy Director of factories, Mysore

33. Copy of the Representation dated 15–10–2018 addressed to the management of the Second Party about their reporting of work on 15–10–2018 at Mysuru Plant with acknowledgment from Deputy Director of factories, Mysore

34. Copy of the Representation dated 15–10–2018 addressed to the management of the Second Party about their reporting of work on 15–10–2018 at Mysuru Plant with acknowledgment from Assistant Labour Commissioner, Mysuru

35. Copy of the Representation dated 15–10–2018 addressed to the management of the Second Party about their reporting of work on 15–10–2018 at Mysuru Plant with acknowledgment from Deputy Commissioner, Mysuru

36. Copy of the Representation dated 16–10–2018 addressed to the management of the Second Party about their reporting of work on 16–10–2018 at Mysuru Plant with acknowledgment from Assistant Labour Commissioner, Mysuru

37. Copy of the Representation dated 16–10–2018 addressed to the management of the Second Party about their reporting of work on 16–10–2018 at Mysuru Plant with acknowledgment from Deputy Commissioner, Mysuru

38. Copy of the Representation dated 16–10–2018 addressed to the management of the Second Party about their reporting of work on 16–10–2018 at Mysuru Plant with acknowledgment from Deputy Director of Factories, Mysuru

39. Copy of the Representation dated 22-10-2018 addressed to the management of the Second Party about their reporting of work on 22-10-2018 at Mysuru Plant with acknowledgment from Deputy Director of Factories, Mysuru

40. Copy of the Representation dated 22-10-2018 addressed to the management of the Second Party about their reporting of work on 22-10-2018 at Mysuru Plant with acknowledgment from the office of the Deputy Commissioner, Mysuru

41. Copy of the Representation dated 22-10-2018 addressed to the management of the Second Party about their reporting of work on 22-10-2018 at Mysuru Plant with acknowledgment from office of the Assistant Labour Commissioner, Mysuru

42. Copy of the Representation dated 23-10-2018 addressed to the management of the Second Party about their reporting of work on 23-10-2018 at Mysuru Plant with acknowledgment from Deputy Director of Factories, Mysuru

43. Copy of the Representation dated 23-10-2018 addressed to the management of the Second Party about their reporting of work on 23-10-2018 at Mysuru Plant with acknowledgment from the office of the Deputy Commissioner, Mysuru

44. Copy of the Representation dated 23-10-2018 addressed to the management of the Second Party about their reporting of work on 23-10-2018 at Mysuru Plant with acknowledgment from the office of the Assistant Labour Commissioner, Mysuru.

45. Copy of the Representation dated 24–10–2018 addressed to the management of the Second Party about their reporting of work on 24–10–2018 at Mysuru Plant with acknowledgment from the office of the Deputy Director of Factories, Mysuru.

46. Copy of the Representation dated 24–10–2018 addressed to the management of the Second Party about their reporting of work on 24–10–2018 at Mysuru Plant with acknowledgment from the office of the Deputy Commissioner, Mysuru

47. Copy of the Representation dated 24–10–2018 addressed to the management of the Second Party about their reporting of work on 24–10–2018 at Mysuru Plant with acknowledgment from the office of the Assistant Labour Commissioner, Mysuru

48. Copy of the Representation dated 25–10–2018 addressed to the management of the Second Party about their reporting of work on 25–10–2018 at Mysuru Plant with acknowledgment from the office of the Deputy Director of Factories, Mysuru

49. Copy of the Representation dated 25–10–2018 addressed to the management of the Second Party about their reporting of work on 25–10–2018 at Mysuru Plant with acknowledgment from the office of the Deputy Commissioner, Mysuru

50. Copy of the Representation dated 25–10–2018 addressed to the management of the Second Party about their reporting of work on 25–10–2018 at Mysuru Plant with acknowledgment from the office of the Assistant Labour Commissioner, Mysuru

51. Copy of the Representation dated 26–10–2018 addressed to the management of the Second Party about their reporting of work on 26–10–2018 at Mysuru Plant with acknowledgment from the office of the Deputy Director of factories, Mysuru

52. Copy of the Representation dated 26–10–2018 addressed to the management of the Second Party about their reporting of work on 26–10–2018 at Mysuru Plant with acknowledgment from the office of the Deputy Commissioner, Mysuru

53. Copy of the Representation dated 26–10–2018 addressed to the management of the Second Party about their reporting of work on 26–10–2018 at Mysuru Plant with acknowledgment from the office of the Assistant Labour Commissioner, Mysuru

54. Copy of the Representation dated 27–10–2018 addressed to the management of the Second Party about their reporting of work on 27–10–2018 at Mysuru Plant with acknowledgment from the office of the Deputy Director of factories, Mysuru

55. Copy of the Representation dated 27–10–2018 addressed to the management of the Second Party about their reporting of work on 27–10–2018 at Mysuru Plant with acknowledgment from the office of the Deputy Commissioner, Mysuru

56. Copy of the Representation dated 27–10–2018 addressed to the management of the Second Party about their reporting of work on 27–10–2018 at Mysuru Plant with acknowledgment from the office of the Assistant Labour Commissioner, Mysuru

57. Copy of the Representation dated 29–10–2018 addressed to the management of the Second Party about their reporting of work on 29–10–2018 at Mysuru Plant with acknowledgment from the office of the Deputy Director of factories, Mysuru

58. Copy of the Representation dated 29–10–2018 addressed to the management of the Second Party about their reporting of work on 29–10–2018 at Mysuru Plant with acknowledgment from the office of the Deputy Commissioner, Mysuru

59. Copy of the Representation dated 29–10–2018 addressed to the management of the Second Party about their reporting of work on 29–10–2018 at Mysuru Plant with acknowledgment from the office of the Assistant Labour Commissioner, Mysuru

60. Copy of the Representation dated 30–10–2018 addressed to the management of the Second Party about their reporting of work on 30–10–2018 at Mysuru Plant with acknowledgment from the office of the Deputy Director of Factories, Mysuru

61. Copy of the Representation dated 30–10–2018 addressed to the management of the Second Party about their reporting of work on 30–10–2018 at Mysuru Plant with acknowledgment from the office of the Deputy Commissioner, Mysuru

62. Copy of the Representation dated 30–10–2018 addressed to the management of the Second Party about their reporting of work on 30–10–2018 at Mysuru Plant with acknowledgment from the office of the Assistant Labour Commissioner, Mysuru

63. Copy of the Representation dated 31–10–2018 addressed to the management of the Second Party about their reporting of work on 31–10–2018 at Mysuru Plant with acknowledgment from the office of the Deputy Director of Factories, Mysuru

64. Copy of the Representation dated 31–10–2018 addressed to the management of the Second Party about their reporting of work on 31–10–2018 at Mysuru Plant with acknowledgment from the office of the Deputy Commissioner, Mysuru

65. Copy of the Representation dated 31–10–2018 addressed to the management of the Second Party about their reporting of work on 31–10–2018 at Mysuru Plant with acknowledgment from the office of the Assistant Labour Commissioner, Mysuru

66. Copy of the Representation dated 02–11–2018 addressed to the management of the Second Party about their reporting of work on 02–11–2018 at Mysuru Plant with acknowledgment from the office of the Deputy Commissioner, Mysuru

67. Copy of the Representation dated 02–11–2018 addressed to the management of the Second Party about their reporting of work on 02–11–2018 at Mysuru Plant with acknowledgment from the office of the Deputy Director of Factories, Mysuru

68. Copy of the Representation dated 02–11–2018 addressed to the management of the Second Party about their reporting of work on 02–11–2018 at Mysuru Plant with acknowledgment from the office of the Assistant Labour Commissioner, Mysuru

69. Copy of the Representation dated 03–11–2018 addressed to the management of the Second Party about their reporting of work on 03–11–2018 at Mysuru Plant with acknowledgment from the office of the Deputy Commissioner, Mysuru

70. Copy of the Representation dated 03–11–2018 addressed to the management of the Second Party about their reporting of work on 03–11–2018 at Mysuru Plant with acknowledgment from the office of the Deputy Director, of Factories, Mysuru.

ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಅವುಗಳನ್ನು ನಿ.ಡಬ್ಲ್ಯೂ 24 ರಿಂದ 93 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ 2 ನೇ ಪಕ್ಷಗಾರರ ಪರ ಶ್ರೀ.ಜೆ.ಪಿ. ರವರಿಂದಃ**

ನನಗೆ ತೆಲಗು ಬಾಷೆ ಮಾತನಾಡಲು ಸ್ವಲ್ಪ ಸ್ವಲ್ಪ ಬರುತ್ತದೆ. ನಾನು ಕೆಲಸವನ್ನು ಸೇರಿಕೊಂಡಿದ್ದ ಸಮಯದಲ್ಲಿ 2 ನೇ ಪಕ್ಷಗಾರರ ಸಂಸ್ಥೆಯೂ ಚೆನ್ನಾಗಿ ನಡೆಯುತ್ತಿತ್ತು. ಆದರೇ ಅದಕ್ಕೂ ಮೊದಲು ಹೇಗೆ ನಡೆಯುತ್ತಿತ್ತು ಎಂದು ನನಗೆ ಗೊತ್ತಿಲ್ಲ. ನಾನು 2012 ನೇ ಸಾಲಿನಲ್ಲಿ ಕೆಲಸಕ್ಕೆ ಸೇರಿಕೊಳ್ಳುವ ಸಮಯದಲ್ಲಿ ನೇರ ಹಾಗೂ ಗುತ್ತಿಗೆ ಕಾರ್ಮಿಕರನ್ನು ಸೇರಿ ಸುಮಾರು 800 ಕ್ಕೂ ಹೆಚ್ಚು ಕಾರ್ಮಿಕರು ಕೆಲಸವನ್ನು ಮಾಡುತ್ತಿದ್ದರು. ಆ ನಂತರದಲ್ಲಿ 2 ನೇ ಪಕ್ಷಗಾರರ ಸಂಸ್ಥೆಯ ಉದ್ದಿಮೆ ಕುಂಠಿತವಾಗಿದ್ದರಿಂದ ಗುತ್ತಿಗೆ ಕಾರ್ಮಿಕರನ್ನು ಕಡಿಮೆ ಮಾಡಿಕೊಂಡು ಬಂದರು ಎನ್ನುವುದಕ್ಕೆ ಸಾಕ್ಷಿಯೂ ಉದ್ದಿಮೆ ಆದಾಯದಲ್ಲಿ ಯಾವುದೇ ತೊಂದರೆಯಾಗಿರಲಿಲ್ಲ. ಆದರೂ ಉದ್ದೇಶ ಪೂರಕವಾಗಿ ಕಾರ್ಮಿಕರ ಸಂಖ್ಯೆಯನ್ನು ಕಡಿಮೆ ಮಾಡುತ್ತಿದ್ದರು ಎಂದು ಹೇಳುತ್ತಾರೆ.

ಖಾಯಂ ಕಾರ್ಮಿಕರ ಕೆಲಸದಲ್ಲಿ ಕಾರ್ಮಿಕರ ಸಂಖ್ಯೆ ಅಗತ್ಯಕ್ಕಿಂತ ಹೆಚ್ಚಳವಾದ್ದರಿಂದ ದಿಃ17.04.2017 ರಂದು 2 ನೇ ಪಕ್ಷಗಾರರ ಸಂಸ್ಥೆಯೂ ಸ್ವಯಂ ನಿವೃತ್ತಿ ಯೋಜನೆಯನ್ನು ತಂದಿತ್ತು ಎನ್ನುವುದು ನಿಜ. ಸಾಕಷ್ಟು ಕೆಲಸ ಇದ್ದರು ಸಹ ಕಾರ್ಮಿಕರನ್ನು ಸಂಖ್ಯೆಯನ್ನು ಕಡಿಮೆ ಮಾಡಬೇಕೆಂಬ ಉದ್ದೇಶದಿಂದ ಸದರಿ ಯೋಜನೆಯನ್ನು ಕೈಗೊಂಡಿದ್ದರು ಎನ್ನುತ್ತಾರೆ. 2 ನೇ ಬಾರಿಗೆ ಸದರಿ ಯೋಜನೆಯನ್ನು ಜಾರಿಯಲ್ಲಿ ತಂದಿತ್ತು ಎನ್ನುವುದು ನಿಜ. ಆ ಸಮಯದಲ್ಲಿ 20 ಜನ

ಕಾರ್ಮಿಕರು ಸ್ವಯಂ ನಿವೃತ್ತಿ ಘೋಷನೆಯನ್ನು ಮಾಡಿಕೊಂಡರು ಎನ್ನುವುದು ನಿಜ. ಆ ನಂತರದಲ್ಲಿ ಕಾರ್ಖಾನೆಯಲ್ಲಿ ಸಾಕಷ್ಟು ಕೆಲಸ ಇಲ್ಲದೇ ಇದಿದ್ದರಿಂದ ಕಾರ್ಮಿಕರಿಗೆ ವೇತನ ಸಹಿತ ರಜೆ ಕೊಡುತ್ತಿದ್ದರು ಎನ್ನುವುದು ನಿಜ. ಆ ಸಮಯದಲ್ಲಿ ಕಾರ್ಖಾನೆಯಲ್ಲಿ ಯಾವುದೇ ಕೆಲಸಗಳು ನಡೆಯುತ್ತಿರಲಿಲ್ಲ ಎನ್ನುವುದು ಸರಿಯಲ್ಲ. ಕಾರ್ಖಾನೆಯಲ್ಲಿ ಕೆಲಸ ಇಲ್ಲದ ಸಮಯದಲ್ಲಿ ಕಾರ್ಮಿಕರಿಗೆ ಕೊಡುತ್ತಿದ್ದ ಇತರೇ ಸೌಲಭ್ಯಗಳ ಖರ್ಚನ್ನು ಕಡಿಮೆ ಮಾಡುವ ಸಲುವಾಗಿ ವೇತನ ಸಹಿತ ರಜೆಯನ್ನು ಕೊಡುತ್ತಿದ್ದರು ಎನ್ನುವುದು ಸುಳ್ಳು.

ಕೇಂದ್ರ ಸರ್ಕಾರದಿಂದ 2010–2011 ನೇ ಸಾಲಿನಲ್ಲಿ 2 ನೇ ಪಕ್ಷಗಾರರ ಆಡಳಿತ ಮಂಡಳಿಗೆ Best Employer ಎಂಬ ಪ್ರಶಸ್ತಿ ಬಂದಿತ್ತು ಎನ್ನುವುದು ನನಗೆ ಗೊತ್ತಿಲ್ಲ. 2016–17 ನೇಸಾಲಿನಲ್ಲಿ ಒಬ್ಬ ಶಶಿಕುಮಾರ್ ಮತ್ತು ಮುರಳೀಧರ್ ಪೇಶ್ವಾ ಎನ್ನುವವರು ನಮಗೆ ಸಂಘವನ್ನು ರಚನೆ ಮಾಡಿಕೊಳ್ಳಲು ಪ್ರೋತ್ಸಾಹವನ್ನು ನೀಡಿದರು ಎನ್ನುವುದು ಸುಳ್ಳು. ಆ ಸಮಯದಲ್ಲಿ ಕಾರ್ಖಾನೆಯ ಒಳಗೆ ಮತ್ತು ಹೊರಗೆ ಕೆಲವೊಂದು ಕಾರ್ಮಿಕರು ಸಂಘವನ್ನು ರಚಿಸುವ ವಿಚಾರದಲ್ಲಿ ಗಲಾಟೆಗಳನ್ನು ಮಾಡಲು ಪ್ರಾರಂಭಿಸಿದೇವು ಎನ್ನುವುದು ಸುಳ್ಳು. ಕಾರ್ಮಿಕರಲ್ಲಿ ಕೆಲವೊಂದು ಕಾರ್ಮಿಕರು ಸಂಘ ರಚನೆಗೆ ಪ್ರತಿರೋಧ ಮಾಡಿ ತಮ್ಮದೇ ಆದ Welfare Association ನ್ನು ಮಾಡಿಕೊಂಡರು ಎನ್ನುವುದು ನಿಜ. ಆದರೇ ಸಂಘ ರಚನೆಯಾದ ನಂತರ ಆಡಳಿತ ಮಂಡಳಿಯ ಉದ್ದೇಶದಿಂದ ರಚನೆ ಮಾಡಿಕೊಂಡರು. ಆಡಳಿತ ಮಂಡಳಿಯವರು ಸದರಿ Welfare Association ನಲ್ಲಿ ಸದಸ್ಯತ್ವವನ್ನು ಹೊಂದಿರುವುದಿಲ್ಲ. ಆಡಳಿತ ಮಂಡಳಿಯೂ ಸದರಿ Welfare Association ನ್ನು ರಚನೆ ಮಾಡಲು ಸಹಾಯ ಮಾಡಿದ್ದರು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಸದರಿ Welfare Association ನ್ನು ರಚನೆ ಮಾಡಿಕೊಂಡ ಕಾರ್ಮಿಕರಿಗೆ ನಮ್ಮ ಸಂಘದ ಕಾರ್ಯ ಚಟುವಟಿಕೆಗಳು ಒಪ್ಪಿಗೆ ಆಗದೇ ಇದ್ದ ಕಾರಣಕ್ಕೆ ಸದರಿ Welfare Association ರಚನೆ ಮಾಡಿಕೊಂಡರು ಎನ್ನುವುದು ಸರಿಯಲ್ಲ. Welfare Association ನ್ನು ರಚನೆ ಮಾಡಲು ಉದ್ದೇಶ ಇರಲಿಲ್ಲ ಎನ್ನುವುದು ಸರಿಯಲ್ಲ.

ಆ ನಂತರದಲ್ಲಿ Welfare Association ನ ಕಾರ್ಮಿಕರು ಕೆಲಸವನ್ನು ಮುಂದುವರೆಸಿದ್ದು, ನಮ್ಮ ಸಂಘದ ಸದಸ್ಯ ಕಾರ್ಮಿಕರುಗಳು ಕೆಲಸಕ್ಕೆ ಹಾಜರಾಗದೇ ಪ್ರತಿಭಟನೆಗಳನ್ನು ಮಾಡುತ್ತಿದ್ದೇವು ಎನ್ನುವುದು ಸರಿಯಲ್ಲ. ಆ ಕಾರಣಕ್ಕೆ ದಿಃ20.03.2018 ರಂದು 2 ನೇ ಪಕ್ಷಗಾರರ ಸಂಸ್ಥೆಯೂ ನಮಗೆ ಎಚ್ಚರಿಕೆ ನೋಟೀಸ್ ನ್ನು ಕೊಟ್ಟಿದ್ದರು ಎನ್ನುವುದು ನಿಜ.

ಆದರೇ ಉದ್ದೇಶ ಪೂರಕವಾಗಿ ಕೊಟ್ಟಿದ್ದರು. ಆಡಳಿತ ಮಂಡಳಿಯೂ ಎಲ್ಲ ಕಾರ್ಮಿಕರಿಗೆ ಕೆಲಸವನ್ನು ಶ್ರದ್ದೆ, ಪ್ರಾಮಾಣಿಕ, ಶಾಂತಿಯಿಂದ ಮತ್ತು ಸೌಹಾರ್ದತೆಯಿಂದ ಮಾಡಿ ಎಂದು ಮನವಿಯನ್ನು ನೋಟೀಸ್ ಬೋರ್ಡ್ ಪ್ರಕಟಿಸುವುದರ ಮೂಲಕ ಮಾಡಿಕೊಳ್ಳುತ್ತಿತ್ತು ಎನ್ನುವುದು ಸುಳ್ಳು.

2 ನೇ ಪಕ್ಷಗಾರರ ಸಂಸ್ಥೆಯಲ್ಲಿ ಹೆಚ್ಚುವರಿ ಕೆಲಸಗಾರರು ಇದಿದ್ದರಿಂದ Voluntary Suppuration Scheme ನ್ನು ಚಾಲನೆ ಮಾಡಿದ್ದು ಆಗ ಕೇವಲ 8 ಜನ ಕಾರ್ಮಿಕರು ಅದರ ಪ್ರಯೋಜನವನ್ನು ಪಡೆದು ನಿವೃತ್ತಿಯನ್ನು ಹೊಂದಿದರು ಎನ್ನುವುದು ನಿಜ.  ಸಾಕ್ಷಿ ಹೇಳುತ್ತಾರೆ. ಯಾವ ಕಾರ್ಮಿಕರಿಗೆ  ಬೇರೆ ಕಡೆ ಕೆಲಸ ಸಿಗುವ ಅನುಕೂಲತೆ ಇತ್ತೋ ಅಂತಹವರು ಮಾತ್ರ ರಾಜೀನಾಮೆಯನ್ನು ಸಲ್ಲಿಸಿದರು. ನಾನು ಸದರಿ Scheme ನ ಪ್ರಯೋಜನೆಯನ್ನು ಪಡೆಯಲಿಲ್ಲ. ನಾನು ಸಂಘವನ್ನು ಬೆಳಸಬೇಕೆಂಬ ಉದ್ದೇಶದಿಂದ ನನಗೆ ಬೇರೆ ಕಡೆ ಕೆಲಸದ ಅವಕಾಶ ಇದ್ದರು ಸಹ ಸದರಿ ಯೋಜನೆಯ ಪ್ರಯೋಜನವನ್ನು ಪಡೆಯಲಿಲ್ಲ ಎನ್ನುವುದು ಸರಿಯಲ್ಲ.

2 ನೇ ಪಕ್ಷಗಾರರ ಸಂಸ್ಥೆಯೂ Electronic Assembly Board ಗಳನ್ನು ತಯಾರಿಸುತ್ತಿತ್ತು ಎನ್ನುವುದು ನಿಜ.  2 ನೇ ಪಕ್ಷಗಾರರ ಸಂಸ್ಥೆಯಲ್ಲಿ ಉತ್ಪಾದಿಸುತ್ತಿದ್ದ printed circuit board ಗಳನ್ನು ಉತ್ಪಾದಿಸುವಂತಹ ಹಲವಾರು ಸಂಸ್ಥೆಗಳು ದೇಶದಲ್ಲಿ ಇವೆ. ಆದರೇ ಯುದ್ಧ ಸಲಕರಣೆಗೆ ಉಪಯೋಗಿಸುವಂತಹ Board ಗಳನ್ನು 2 ನೇ ಪಕ್ಷಗಾರರ ಸಂಸ್ಥೆ ಮೈಸೂರಿನಲ್ಲಿ ಮಾತ್ರ  ಉತ್ಪಾದಿಸುತ್ತದೆ. 2 ನೇ ಪಕ್ಷಗಾರರ ಸಂಸ್ಥೆಯಲ್ಲಿ ಉತ್ಪಾದಿಸಿದ printed circuit board ಗಳನ್ನು ಖರೀದಿಸುವ ಗ್ರಾಹಕರು ತಿರುಪತಿಯ ಶ್ರೀ ಸಿಟಿ ಎಂಬಲ್ಲಿ ಹೆಚ್ಚು ಇದ್ದಾರೆ ಎನ್ನುವುದು ಸುಳ್ಳು.  ಆ ಕಾರಣಕ್ಕೆ 2 ನೇ ಪಕ್ಷಗಾರರ ಸಂಸ್ಥೆಯೂ ಸದರಿ ಸ್ಥಳದಲ್ಲಿ ಇನ್ನೊಂದು ಕಾರ್ಖಾನೆಯನ್ನು ಪ್ರಾರಂಭಿಸಬೇಕು ಎಂದು ತೀರ್ಮಾನಿಸಿತ್ತು ಎನ್ನುವುದು ಸುಳ್ಳು. ಸದರಿ ಶ್ರೀ ಸಿಟಿಗೆ Electronic Cluster ಎಂದು ರಾಜ್ಯ ಸರ್ಕಾರವು  ಗುರುತಿಸಿದ್ದರು ಎನ್ನುವುದು ನನಗೆ ಗೊತ್ತಿಲ್ಲ. 2 ನೇ ಪಕ್ಷಗಾರರ ಸಂಸ್ಥೆಯೂ ಸದರಿ ಸ್ಥಳದಲ್ಲಿ ಸರ್ಕಾರ ಮಂಜೂರು ಮಾಡಿದ್ದ ಸ್ಥಳದಲ್ಲಿ ಕಾರ್ಖಾನೆಯನ್ನು ಸ್ಥಾಪಿಸುವ ಸಲುವಾಗಿ ಸಂಬಂಧಪಟ್ಟ ಎಲ್ಲ ವಿಭಾಗಗಳಿಂದ License ನ್ನು ಪಡೆದುಕೊಂಡಿತ್ತು ಎನ್ನುವುದು ಸುಳ್ಳು. ಸದರಿ ಕಾರ್ಖಾನೆಯನ್ನು ನಡೆಸುವ ಉದ್ದೇಶದಿಂದ ಮೈಸೂರಿನಲ್ಲಿಯ ಕಾರ್ಮಿಕರಲ್ಲಿಯ ಹಿರಿಯ ಮತ್ತು ನೂರಿತ ಕಾರ್ಮಿಕರನ್ನು ಸದರಿ ಸ್ಥಳಕ್ಕೆ ವರ್ಗಾವಣೆ ಮಾಡಿದ್ದರು ಎನ್ನುವುದಕ್ಕೆ ಸಾಕ್ಷಿಯೂ ಕೆಲಸದಿಂದ ತೆಗೆಯಬೇಕೆಂಬ ದುರುದ್ದೇಶದಿಂದ ವರ್ಗಾವಣೆ ಮಾಡಿದ್ದರು ಎನ್ನುತ್ತಾರೆ. ದಿಃ18.05.2018 ರಂದು ನನಗೆ ಸದರಿ ವರ್ಗಾವಣೆ ಪತ್ರವನ್ನು ಕೊಟ್ಟಿದ್ದು, ಅದನ್ನು ನಾನು

ನಿರಾಕರಿಸಿದ್ದೆ ಎನ್ನುವುದು ನಿಜ. ಸದರಿ ವರ್ಗಾವಣೆಯ ಸ್ದಳಕ್ಕೆ ಕೆಲಸಕ್ಕೆ ಹಾಜರಾಗಲು ವೆಚ್ಚದೊಂದಿಗೆ 15 ದಿವಸಗಳ ಕಾಲಾವಕಾಶ ಕೊಟ್ಟಿದ್ದರು ಎನ್ನುವುದು ನಿಜ. ಆ ನಂತರ ನಾನು ಸದರಿ ಸ್ಥಳಕ್ಕೆ ಕೆಲಸಕ್ಕೆ ಹಾಜರಾಗಲಿಲ್ಲ ಎನ್ನುವುದು ನಿಜ. ಕೆಲಸಕ್ಕೆ ಹಾಜರಾಗದೇ ಸಂಸ್ಥೆಯ ಆವರಣದ ಹೊರಗೆ ನಾವು ಗಲಾಟೆಗಳನ್ನು ಮಾಡಲು ಪ್ರಾರಂಭಿಸಿದೆವು ಎನ್ನುವುದು ಸರಿಯಲ್ಲ. ಸಾಕ್ಷಿ ಹೇಳುತ್ತಾರೆ. ಕಾನೂನು ಬಾಹಿರವಾಗಿ ವರ್ಗಾವಣೆ ಮಾಡಿದ್ದರಿಂದ ಪ್ರತಿಭಟನೆಯನ್ನು ಮಾಡಿದ್ದೇವು. ನಮ್ಮ ವರ್ಗಾವಣೆಯ ಆದೇಶ ಕಾನೂನು ಬಾಹಿರವಾಗಿದೆ ಎಂದು ಕಾರ್ಮಿಕ ಇಲಾಖೆಯಲ್ಲಿ ಮತ್ತು ನ್ಯಾಯಾಲಯದಲ್ಲಿ ಯಾವುದೇ ಪ್ರಶ್ನೆಯನ್ನು ಮಾಡಲಿಲ್ಲ. ನಾವು ಪ್ರತಿಭಟನೆಯನ್ನು ಮಾಡುತ್ತಿದ್ದರಿಂದ 2 ನೇ ಪಕ್ಷಗಾರರ ಸಂಸ್ಥೆಯೂ ನಮ್ಮ ವಿರುದ್ಧ ಸಿವಿಲ್ ನ್ಯಾಯಾಲಯದಿಂದ ನಿರ್ಬಂಧಕಾಜ್ಞೆಯನ್ನು ಪಡೆದಿದ್ದರು ಎನ್ನುವುದು ನಿಜ.

ದಿಃ30.06.2018, 31.07.2018, 10.08.2018 ರಂದು 2 ನೇ ಪಕ್ಷಗಾರರ ಸಂಸ್ಥೆಯವರು ನನಗೆ ವರ್ಗಾವಣೆಗೊಂಡ ಸ್ಥಳಕ್ಕೆ ಕೆಲಸಕ್ಕೆ ಹಾಜರಾಗದೇ ನೆನಪೋಲೆಗಳನ್ನು ಕಳುಹಿಸಿದ್ದರು ಎನ್ನುವುದು ನಿಜ.

ಕಾರ್ಮಿಕರನ್ನು ತಿರುಪತಿಗೆ ವರ್ಗಾವಣೆ ಮಾಡುವ ಸಮಯದಲ್ಲಿ ನಮ್ಮ ಸಂಘದಿಂದ ಕಾರ್ಮಿಕ ಇಲಾಖೆಯಲ್ಲಿ ಒಂದು ವ್ಯಾಜ್ಯವನ್ನು ಹೂಡಿದ್ದೆವು ಎನ್ನುವುದು ನಿಜ. ಆಗ ಶಶಿಕುಮಾರ್ ಎಂ.ಕೆ ಅಧ್ಯಕ್ಷರು ಮತ್ತು ಮುರಳಿಧರ್ ಪೇಶ್ವಾ ಸಲಹೆಗಾರರು ಸಂಧಾನ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಿದ್ದರು ಎನ್ನುವುದು ನಿಜ. ಮುರಳಿಧರ್ ಪೇಶ್ವಾ ತಿರುಪತಿಯ ಕಾರ್ಖಾನೆಯ ಸ್ಥಳ ಪರಿವೀಕ್ಷಣೆ ಮಾಡಿ ವರದಿಯನ್ನು ಕೊಟ್ಟ ಆಧಾರದಲ್ಲಿ ಕಾರ್ಮಿಕರು ಸದರಿ ಸ್ಥಳಕ್ಕೆ ಕೆಲಸಕ್ಕೆ ಹೋಗಿದ್ದರು ಎನ್ನುವುದು ಸರಿಯಲ್ಲ. ಸಾಕ್ಷಿ ಹೇಳುತ್ತಾರೆ. ಕೆಲಸವನ್ನು ಕಳೆದುಕೊಳ್ಳುತ್ತೇವೆ ಎಂಬ ಒತ್ತಡದಲ್ಲಿ ಹಾಗೂ ವೇತನ ಇಲ್ಲದ ಕಾರಣಕ್ಕೆ Deputation ಆಧಾರದಲ್ಲಿ ಹೋಗಿದ್ದರು. 2 ನೇ ಪಕ್ಷಗಾರರ ಸಂಸ್ಥೆಯೂ ಸದರಿ ತಿರುಪತಿಯಲ್ಲಿಯ ಕಾರ್ಖಾನೆಯನ್ನು ನಡೆಸುವ ಸ್ಥಳದ ಪರವಾನಿಗೆಯನ್ನು ಕೇವಲ ಒಂದು ವರ್ಷದ ಅವಧಿಗೆ ಮಾತ್ರ ಮಾಡಿಕೊಂಡಿದ್ದರು. ಆದರೇ ಕಾರ್ಮಿಕರೊಂದಿಗೆ 2 ವರ್ಷದ ಅವಧಿಗೆ ಒಪ್ಪಂದವನ್ನು ಮಾಡಿಕೊಂಡಿದ್ದರು. ಸದರಿ ಅವಧಿಯೂ 1 ವರ್ಷ ಅಲ್ಲ ಎನ್ನುವುದು ಮತ್ತು 3 ವರ್ಷದ ಅವಧಿ ಆಗಿತ್ತು ಎನ್ನುವುದು ಸುಳ್ಳು. ನಮಗೆ ಸದರಿ ಕರಾರಿನ ಕುರಿತು ಸರಿಯಾದ ಮಾಹಿತಿ ಇಲ್ಲದೇ ಇದ್ದರು ಕಾರ್ಮಿಕರಿಗೆ ತಪ್ಪು ಮಾಹಿತಿಯನ್ನು ನೀಡಿ ಮುಷ್ಕರವನ್ನು ಮಾಡಿಸಿದ್ದೇವು ಎನ್ನುವುದು ಸರಿಯಲ್ಲ.

ನನಗೆ ತಿರುಪತಿಯ ಕಾರ್ಖಾನೆಯ ಕುರಿತು ವೈಯಕ್ತಿಕವಾದ ಮಾಹಿತಿ ಇಲ್ಲ ಎನ್ನುವುದು ಸರಿಯಲ್ಲ. ಕಾರ್ಮಿಕರು ತಿರುಪತಿ

ಕಾರ್ಖಾನೆಯ ಆವರಣದಲ್ಲಿ ವಿನಾಕಾರಣ 2 ನೇ ಪಕ್ಷಗಾರರ ಸಂಸ್ಥೆಯೂ ಸದರಿ ಸ್ಥಳದಲ್ಲಿ ಕಾರ್ಖಾನೆಯನ್ನು ನಡೆಸಬಾರದೆಂದು ಮತ್ತು ಕಾರ್ಮಿಕರನ್ನು ಮೈಸೂರಿಗೆ ಮರುವರ್ಗಾವಣೆ ಮಾಡಲಿ ಎಂಬ ಉದ್ದೇಶದಿಂದ ಮುಷ್ಕರಗಳನ್ನು ಮಾಡಿದ್ದರು ಎನ್ನುವುದು ಸರಿಯಲ್ಲ.

ಕಾರ್ಮಿಕ ಇಲಾಖೆ ಬೆಂಗಳೂರಿನಲ್ಲಿ ಆದ ಸಮಾಲೋಚನೆಯಂತೆ ಶ್ರೀ. ಮುರಳಿಧರ ಪೇಶ್ವಾ ಸ್ಥಳ ಪರಿಶೀಲನೆ ಮಾಡಿ ಕಾರ್ಮಿಕರ ವಾಸದ ಸಲುವಾಗಿ ಸ್ಥಳ ನಿಗದಿಮಾಡಿ ಆಡಳಿತ ಮಂಡಳಿಯೂ ಕಾರ್ಮಿಕರಿಗೆ ವಾಸಕ್ಕೆ ಅನುಕೂಲ ಮಾಡುವ ಕಾರಣಕ್ಕೆ ವೇತನ ಸಹಿತ 15 ದಿನಗಳ ರಜೆ ಮಂಜೂರು ಮಾಡಿದ್ದರು ಎನ್ನುವುದು ನಿಜ. ಆ ನಂತರ ಕಾರ್ಮಿಕರು ಕೆಲಸವನ್ನು ಪ್ರಾರಂಭಿಸಿದ್ದರು ಎನ್ನುವುದು ಸರಿಯಲ್ಲ.

ತಿರುಪತಿಯ ಕಾರ್ಮಿಕ ಇಲಾಖೆಯಲ್ಲಿ ನಮ್ಮ ಸಂಘದಿಂದ ಕಾರ್ಮಿಕರು ವ್ಯಾಜ್ಯಗಳನ್ನು ಹೂಡಿದ್ದರು ಎನ್ನುವುದು ನಿಜ. ತಿರುಪತಿಯ ಕಾರ್ಮಿಕ ಇಲಾಖೆಗೆ ಬೇಡಿಕೆ ಪಟ್ಟಿಯನ್ನು ಕೊಟ್ಟಿದ್ದರು ಎನ್ನುವುದು ನಿಜ. ಸದರಿ ಇಲಾಖೆಯ ವ್ಯಾಜ್ಯಗಳು ಇಲ್ಲಿಯವರೆಗೂ ತಿರ್ಮಾನ ಮಾಡಿಲ್ಲ. ಸದರಿ ವ್ಯಾಜ್ಯಗಳ ಪ್ರತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಈ ಪ್ರಕರಣದ 1 ನೇ ಪಕ್ಷಗಾರ ಕಾರ್ಮಿಕರನ್ನು 2 ನೇ ಪಕ್ಷಗಾರರ ಸಂಸ್ಥೆಯೂ Retrenchment ಮಾಡುವ ಸಮಯದಲ್ಲಿ ಸದರಿಯವರು ತಿರುಪತಿಯ ಕಾರ್ಖಾನೆಯಲ್ಲಿ ಕೆಲಸವನ್ನು ಮಾಡುತ್ತಿದ್ದರು ಎನ್ನುವುದು ನಿಜ. ಆ ಸಮಯದಲ್ಲಿ ಕಾನೂನು ಬದ್ಧವಾದ ಪರಿಹಾರವನ್ನು ಸದರಿ ಕಾರ್ಮಿಕರಿಗೆ 2 ನೇ ಪಕ್ಷಗಾರರ ಸಂಸ್ಥೆಯೂ ಕೊಟ್ಟಿತ್ತು ಎನ್ನುವುದು ಸರಿಯಲ್ಲ. ಸರಿಯಾದ ಪರಿಹಾರವನ್ನು ಕೊಟ್ಟಿಲ್ಲ ಎಂದು ಸದರಿ ಕಾರ್ಮಿಕರು ತಿರುಪತಿಯ ಕಾರ್ಮಿಕ ಇಲಾಖೆ ಮತ್ತು ನ್ಯಾಯಾಲಯದಲ್ಲಿ ಯಾವುದೇ ವ್ಯಾಜ್ಯವನ್ನು ಹೂಡಿರುವುದಿಲ್ಲ. 1 ನೇ ಪಕ್ಷಗಾರರ ಕಾರ್ಮಿಕರು ತಿರುಪತಿಯ ಕಾರ್ಖಾನೆಯ ಕಾರ್ಮಿಕರಾಗಿದ್ದರಿಂದ ಅವರ Retrenchment ಗೆ ಸಂಬಂಧಪಟ್ಟ ವಿವಾದವನ್ನು ತಿರುಪತಿಯ ಕಾರ್ಮಿಕ ಇಲಾಖೆಗೆ ಸಲ್ಲಿಸಬೇಕು ಎನ್ನುವುದು ಮತ್ತು ಮೈಸೂರಿನ ಕಾರ್ಮಿಕ ಇಲಾಖೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ ಎನ್ನುವುದು ಸರಿಯಲ್ಲ.

2 ನೇ ಪಕ್ಷಗಾರರ ಸಂಸ್ಥೆಯೂ ತಿರುಪತಿಯಲ್ಲಿ ಕಾರ್ಖಾನೆಯನ್ನು ಪ್ರಾರಂಭ ಮಾಡಬಾರದು ಎಂದು ಮತ್ತು ನಡೆಸಬಾರದು ಎಂದು ನಮ್ಮ ಸಂಘ ಆಡಳಿತ ಮಂಡಳಿಗೆ ಬಹಳಷ್ಟು ಕಿರುಕುಳವನ್ನು ಕೊಟ್ಟಿದ್ದಾರೆ ಎನ್ನುವುದು ಸರಿಯಲ್ಲ. ಅದಕ್ಕೆ ಸಂಬಂಧಪಟ್ಟ ಕೆಲವೊಂದು ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯ Stay ಯನ್ನು ನೀಡಿರುತ್ತದೆ ಎನ್ನುವುದು

ನನಗೆ ಗೊತ್ತಿಲ್ಲ. ಕಾರ್ಮಿಕರು ಮುಷ್ಕರ ನಿರತ ಸಮಯದಲ್ಲಿ 2 ನೇ ಪಕ್ಷಗಾರ ಸಂಸ್ಥೆಯ ಆಡಳಿತ ಮಂಡಳಿಯೂ ಕಾಳಹಸ್ತಿ ಸಿವಿಲ್ ನ್ಯಾಯಾಲಯದಲ್ಲಿ ಮನಾಹಿ ಆದೇಶಕ್ಕಾಗಿ ದಾವೆಯನ್ನು ಹೂಡಿದ್ದರು ಎನ್ನುವುದು ನಿಜ. ಕಾರ್ಮಿಕರಿಗೆ ವೇತನವನ್ನು ತಿರುಪತಿಯ ಕಾರ್ಖಾನೆಯಿಂದಲೇ ಕೊಡುತ್ತಿದ್ದು, ಇ.ಎಸ್.ಐ ಮತ್ತು ಪಿ.ಎಫ್ ಸಹ ಅದೇ ಕಾರ್ಖಾನೆಯ ಕೋಡ್ ಸಂಖ್ಯೆಯಿಂದ ಕೊಡುತ್ತಿದ್ದರು ಎನ್ನುವುದು ನಿಜ. 2 ನೇ ಪಕ್ಷಗಾರರ ಸಂಸ್ಥೆಯೂ 1 ನೇ ಪಕ್ಷಗಾರ ಕಾರ್ಮಿಕರನ್ನು ಕಾನೂನು ಬದ್ಧವಾಗಿ retrenchment ಮಾಡಿದ್ದರು ಸಹ ಸತ್ಯ ಸಗಂತಿಗಳನ್ನು ಮರೆಮಾಚಿ ವ್ಯಾಜ್ಯವನ್ನು ಹೂಡಿದ್ದೇವೆ ಎನ್ನುವುದು ಸರಿಯಲ್ಲ. ವ್ಯಾಜ್ಯ ಕಾರಣ ತಿರುಪತಿಯಲ್ಲಿ ಉಂಟಾಗಿದ್ದರು ಮತ್ತು ಈ ನ್ಯಾಯಾಲಯಕ್ಕೆ ಯಾವುದೇ ವ್ಯಾಜ್ಯಕಾರಣ ಇಲ್ಲದೇ ಇದ್ದರು ಸುಳ್ಳು ಪ್ರಕರಣವನ್ನು ಹೂಡಿದ್ದೇವೆ ಎನ್ನುವುದು ಸರಿಯಲ್ಲ.

ದಿಃ10.08.2018 ರಂದು ನಾನು ವರ್ಗಾವಣೆಗೊಂಡ ಸ್ಥಳಕ್ಕೆ ಹೋಗಿ ಕೆಲಸಕ್ಕೆ ಹಾಜರಾದೇ ಎನ್ನುವುದು ನಿಜ. ಆದರೇ ನಾನು Deputation ಆಧಾರದಲ್ಲಿ ಕೆಲಸಕ್ಕೆ ಹಾಜರಾಗಿದ್ದೆ. ಸದರಿ ಕಾರ್ಖಾನೆಯಲ್ಲಿ ಪ್ರತಿ ದಿನದ ಹಾಜರಾತಿ ಪುಸ್ತಕವನ್ನು ಬರೆಯುತ್ತಿದ್ದರು ಎನ್ನುವುದು ನಿಜ. ಸದರಿ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ಸಂಘವನ್ನು ರಚನೆ ಮಾಡಿಕೊಂಡಿರಲಿಲ್ಲ. ತಿರುಪತಿಯಲ್ಲಿ ಸಾಕ್ಷಿ ಮತ್ತು ಪ್ರಜಾಶಕ್ತಿ ಎಂಬ ದಿನಪತ್ರಿಕೆಗಳು ಇವೆ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಸ್ಥಳದಲ್ಲಿ ನಾವು ಕೆಲಸವನ್ನು ಮಾಡದೇ ದಿಃ16.08.2018 ರಿಂದ ಸ್ಥಳಿಯ ಸಂಘಟನೆಗಳೊಂದಿಗೆ ಸೇರಿಕೊಂಡು ಮುಷ್ಕರ ಮಾಡಲು ಪ್ರಾರಂಭಿಸಿದೆವು ಎನ್ನುವುದು ಸರಿಯಲ್ಲ. ಸಾಕ್ಷಿ ಹೇಳುತ್ತಾರೆ. ಅಲ್ಲಿ ಯಾವುದೇ ಮೂಲಭೂತ ಸೌಕರ್ಯ ಇಲ್ಲದೇ ಇದಿದ್ದರಿಂದ ಮತ್ತು ಕೆಲಸ ಕೊಡದೆ ಇದಿದ್ದರಿಂದ ಕೇವಲ ಕಾರ್ಮಿಕ ಇಲಾಖೆಯ ಗಮನಕ್ಕೆ ತಂದಿದ್ದೆವು. ಆದರೇ ಮುಷ್ಕರವನ್ನು ಮಾಡಿರಲಿಲ್ಲ. ನಮಗೆ ಹಲವಾರು ಸೌಲಭ್ಯಗಳನ್ನು ಕೊಡಬೇಕೆಂದು ಸದರಿ ಸಂಘಟನೆಗಳ ನೇತೃತ್ವದಲ್ಲಿ ಪ್ರತಿಭಟನೆಯನ್ನು ಮಾಡಿದ್ದೇವು ಎನ್ನುವುದು ಸರಿಯಲ್ಲ. ಸದರಿ ಸಂಗತಿಯೂ ದಿನಪತ್ರಿಕೆಯಲ್ಲಿ ಪ್ರಕಟವಾಗಿತ್ತು ಎನ್ನುವುದು ನನಗೆ ಗೊತ್ತಿಲ್ಲ. ಆ ನಂತರ 2 ನೇ ಪಕ್ಷಗಾರರ ಸಂಸ್ಥೆಯೂ ದಿಃ17.08.2018 ರಂದು ಕಾರ್ಮಿಕರಿಗೆ ಪ್ರತಿಭಟನೆ ಮಾಡಬಾರದೆಂದು ನೋಟೀಸ್ ಪ್ರಕಟಿಸಿ ಮನವಿ ಮಾಡಿಕೊಂಡರು ಎನ್ನುವುದು ಸುಳ್ಳು ಮತ್ತು ಅದೇ ದಿವಸ ತರಬೇತಿ ಅವಧಿಯ ವೇಳಾಪಟ್ಟಿಯನ್ನು ಪ್ರಕಟಿಸಿದರು ಎನ್ನುವುದು ಸುಳ್ಳು. ದಿಃ18.08.2018 ರಂದು ಸ್ಥಳಿಯ ಕಾರ್ಮಿಕ ಇಲಾಖೆಯಲ್ಲಿ ಸಮಾಲೋಚನೆಯನ್ನು ಮಾಡಿದ್ದು, ಆಗ ಕೆಲಸ ಮಾಡಲು ನಾವು 15 ದಿನಗಳ ಕಾಲಾವಕಾಶವನ್ನು ಕೇಳಿಕೊಂಡೆವು ಎನ್ನುವುದು ಸರಿಯಲ್ಲ. 2 ನೇ ಪಕ್ಷಗಾರರ ಸಂಸ್ಥೆಯೂ ದಿಃ02.09.2018 ರವರೆಗೂ

ವೇತನ ಸಹಿತ ರಜೆ ಕೊಡುವುದಾಗಿ ಹೇಳಿದ್ದರು ಎನ್ನುವುದು ನಿಜ. 2018 ರ ಆಗಸ್ಟ್ ತಿಂಗಳ ವೇತನವನ್ನು 21 ದಿವಸಕ್ಕೆ ಲೆಕ್ಕಹಾಕಿ ಕೊಟ್ಟಿದ್ದಾರೆ ಎನ್ನುವುದಕ್ಕೆ ಸಾಕ್ಷಿಯೂ ವೇತನವನ್ನು ಕೊಟ್ಟಿದ್ದಾರೆ ಆದರೇ ಎಷ್ಟು ದಿನದ ವೇತನ ಎಂದು ನನಗೆ ನೆನಪಿಲ್ಲ.

ದಿಃ03.09.2018 ರಂದು ನಾನು ಕೆಲಸಕ್ಕೆ ವರದಿ ಮಾಡಿಕೊಂಡೆ ಎನ್ನುವುದು ನಿಜ. ಆದರೇ ದಿನಾಂಕ ನೆನಪಿಲ್ಲ. ನಾವು ಕೆಲಸಕ್ಕೆ ಹಾಜರಾದ ನಂತರ ಕೆಲಸವನ್ನು ಮಾಡದೇ ಕಾಲಾಹರಣವನ್ನು ಮಾಡಿದ್ದು ಮತ್ತು ಸದರಿ ಕೆಲಸದ ಸ್ಥಳವನ್ನು ಬಿಟ್ಟು ಹೋಗಿರಲಿಲ್ಲ ಎನ್ನುವುದು ಸುಳ್ಳು. ಆ ನಂತರ ಆಡಳಿತ ಮಂಡಳಿಯೂ ನಮಗೆ ಕೆಲಸದ ಸ್ಥಳವನ್ನು ಅವಧಿಯ ನಂತರ ಬಿಟ್ಟು ಹೋಗಬೇಕೆಂದು ನೋಟೀಸ್ ಪ್ರಕಟಿಸಿದ್ದರು ಎನ್ನುವುದು ಸುಳ್ಳು. ಸಾಕ್ಷಿ ಹೇಳುತ್ತಾರೆ. ಸಮಾಲೋಚನೆಯ ಒಪ್ಪಂದಂತೆ ಆಡಳಿತ ಮಂಡಳಿಯೂ ನಮಗೆ ಉಳಿದ ಕೊಳ್ಳಲು ವಸತಿ ವ್ಯವಸ್ಥೆಯನ್ನು ಮಾಡಿಕೊಡದೇ ಇದಿದ್ದರಿಂದ ನಾವು ಅನಿರ್ವಾಯವಾಗಿ ಕೆಲಸದ ಸ್ಥಳದಲ್ಲಿ ಉಳಿದುಕೊಂಡೆವು. ಸಮಾಲೋಚನೆಯ ಸಮಯದಲ್ಲಿ ವಸತಿ ವ್ಯವಸ್ಥೆಯನ್ನು ನಾವೇ ಮಾಡಿಕೊಳ್ಳುತ್ತೇವೆ ಎಂದು ಒಪ್ಪಿಕೊಂಡಿದ್ದು ಅದರಂತೆ ವಸತಿ ವ್ಯವಸ್ಥೆಯನ್ನು ನಾವು ಮಾಡಿಕೊಂಡಿರಲಿಲ್ಲ ಎನ್ನುವುದು ಸರಿಯಲ್ಲ. ಆ ನಂತರ ಸ್ಥಳಿಯ ಕಾರ್ಮಿಕ ಇಲಾಖೆಯ ಡಿ.ಎಲ್.ಸಿ ರವರು ಸ್ಥಳಕ್ಕೆ ಬೇಟಿಮಾಡಿ ನಮಗೆ ಕಾರ್ಖಾನೆಯ ಆವರಣವನ್ನು ಬಿಟ್ಟುಹೋಗಲು ತಿಳಿಹೇಳಿದ್ದರು ನಾವು ಬಿಟ್ಟು ಹೋಗಿರಲಿಲ್ಲ ಎನ್ನುವುದು ಸುಳ್ಳು. ಆಡಳಿತ ಮಂಡಳಿಯ ಪ್ರತಿನಿಧಿಗಳನ್ನು ನಾವು ಬೇದರಿಸಿ ಸ್ಥಳದಿಂದ ಕಳುಹಿಸಿದ್ದ ಕಾರಣಕ್ಕೆ ತಾತ್ಕಲಿಕವಾಗಿ ಉತ್ಪಾದನೆಯ ಚಟುವಟಿಕೆಗಳನ್ನು ದಿಃ05.09.2018 ರಿಂದ ನಿಲ್ಲಿಸಿದ್ದರು ಎನ್ನುವುದು ಸುಳ್ಳು. ಸದರಿ ನೋಟೀಸ್ ನ್ನು ಪ್ರಕಟಿಸಿದ್ದರು ಎನ್ನುವುದು ಸುಳ್ಳು. ಕಾರ್ಖಾನೆಯ ಆವರಣದಲ್ಲಿ ಸಹಜ ಸ್ಥಿತಿಗೆ ಮರಳೂವವರೆಗೂ ವೇತನವನ್ನು ಕೊಡುವುದಿಲ್ಲ ಎಂದು ಸದರಿ ನೋಟೀಸ್ ನಲ್ಲಿ ತಿಳಿಸಿತ್ತು ಎನ್ನುವುದು ಸುಳ್ಳು. ದಿಃ11.09.2018 ರಂದು 2 ನೇ ಪಕ್ಷಗಾರರ ಸಂಸ್ಥೆಯೂ ನಮಗೆ ಕಾರ್ಖಾನೆಯ ಸ್ಥಳವನ್ನು ತೆರವುಗೊಳಿಸಬೇಕೆಂದು ನೋಟೀಸ್ ನ್ನು ಪ್ರಕಟಿಸಿದ್ದರು ಎನ್ನುವುದು ಸುಳ್ಳು. ದಿಃ19.11.2018 ರಂದು ಉತ್ಪಾದನೆಯನ್ನು ಪ್ರಾರಂಭಿಸುವುದಾಗಿ ತಿಳಿಸಿ ನಮಗೆ ಕೆಲಸಕ್ಕೆ ಒಳ್ಳೆಯ ನಡತೆಯ ವಚನ ಪತ್ರವನ್ನು ಬರೆದುಕೊಟ್ಟು ಬರಬೇಕೆಂದು ತಿಳಿಸಿದ್ದರು ಎನ್ನುವುದು ಸುಳ್ಳು. ಸದರಿ ನೋಟೀಸ್ ಪ್ರತಿಯನ್ನು ಕಾರ್ಮಿಕ ಇಲಾಖೆಯ ಎಲ್ಲಾ ಅಧಿಕಾರಿಗಳಿಗೂ ಆಡಳಿತ ಮಂಡಳಿಯೂ ಕೊಟ್ಟಿತ್ತು ಎನ್ನುವುದು ಸುಳ್ಳು. ನಾವು ಎಲ್ಲ ಕಾರ್ಮಿಕರು ವರ್ಗಾವಣೆಗೊಂಡ ಸ್ಥಳದಲ್ಲಿ ಕೆಲಸವನ್ನು

ಮಾಡಲು ಆಸಕ್ತಿ ಇಲ್ಲದ ಕಾರಣಕ್ಕೆ ಆಡಳಿತ ಮಂಡಳಿಯ ವಿರುದ್ಧ ವಿನಾಕಾರಣ ತೊಂದರೆಗಳನ್ನು ಮಾಡಿ ಕೆಲಸ ಮಾಡಿರಲಿಲ್ಲ ಎನ್ನುವುದು ಸುಳ್ಳು.

ದಿಃ05.07.2019 ರಂದು 2 ನೇ ಪಕ್ಷಗಾರರ ಸಂಸ್ಥೆಯೂ ನೋಟೀಸ್ ಬೋರ್ಡ್ ನಲ್ಲಿ ನಮಗೆ ಕೆಲಸಕ್ಕೆ ಹಾಜರಾಗಲು ಮತ್ತು ಉತ್ಪಾದನೆಗೆ ಸಹಕರಿಸಲು ಮನವಿಯನ್ನು ಪ್ರಕಟಿಸಿತ್ತು ಎನ್ನುವುದು ಸುಳ್ಳು. ದಿಃ13.09.2019 ರಂದು 2 ನೇ ಪಕ್ಷಗಾರರ ಸಂಸ್ಥೆಯೂ ವಿನಾಕಾರಣ ರಜೆಗಳನ್ನು ಹಾಕಬಾರದೆಂದು ಕಾರ್ಮಿಕರಿಗೆ ನೋಟೀಸ್ ನ್ನು ಬೋರ್ಡ್ ನಲ್ಲಿ ಪ್ರಕಟಿಸಿತ್ತು ಎನ್ನುವುದು ಸುಳ್ಳು. ನಾವು ಕೆಲಸವನ್ನು ಸರಿಯಾಗಿ ಮಾಡದೇ ನಿದ್ದೆ ಮಾಡುವುದು, ಕಾಲಹರಣ ಮಾಡುವುದು ಹಾಗೂ ಗೈರುಹಾಜರಾಗುವುದು ಮಾಡುತ್ತಿದ್ದೇವು ಎನ್ನುವುದು ಸರಿಯಲ್ಲ. 2 ನೇ ಪಕ್ಷಗಾರರ ಸಂಸ್ಥೆಯಲ್ಲಿ ನಾವು ಕೆಲಸ ಮಾಡಿದ ಅವಧಿಗೆ ಮಾತ್ರ ವೇತನವನ್ನು ಕೊಡುತ್ತಿದ್ದರು ಎನ್ನುವುದು ಸರಿಯಲ್ಲ. ಆದರೇ ಕೆಲಸ ಕೊಡದೇ ವೇತನವನ್ನು ಕೊಡುತ್ತಿದ್ದರು.

ಮಾರ್ಚ್ 2020 ರಿಂದ ಕೋವಿಡ್ ಕಾರಣಕ್ಕೆ ಉದ್ದೀಮೆಗಳು ಸ್ಥಗಿತಗೊಂಡಿದ್ದವು ಎನ್ನುವುದು ನಿಜ. ದಿಃ31.05.2020 ರಂದು 2 ನೇ ಪಕ್ಷಗಾರರ ಸಂಸ್ಥೆಯೂ ನಮ್ಮನ್ನು ಕೆಲಸದಿಂದ ಬಿಡುಗಡೆಗೊಳಿಸಿ ಪರಿಹಾರವನ್ನು ಕೊಟ್ಟಿದ್ದಾರೆ ಎನ್ನುವುದು ನಿಜ. 2 ನೇ ಪಕ್ಷಗಾರರ ಸಂಸ್ಥೆಗೆ ನಾವು ತೊಂದರೆಯನ್ನು ಕೊಟ್ಟಿದ್ದರಿಂದ ಸದರಿ ಉದ್ದೀಮೆಯನ್ನು ನಡೆಸಲು ಆಗದಕಾರಣಕ್ಕೆ ನಮ್ಮನ್ನು ಕೆಲಸದಿಂದ ಬಿಡುಗಡೆಗೊಳಿಸಿ ಪರಿಹಾರವನ್ನು ಕೊಟ್ಟಿದ್ದರು ಎನ್ನುವುದು ಸರಿಯಲ್ಲ. ಸಾಕ್ಷಿ ಹೇಳುತ್ತಾರೆ. ನಾವು ಸಂಘಟನೆಯನ್ನು ಮಾಡಿಕೊಂಡಿದ್ದರಿಂದ ಕೆಲಸದಿಂದ ಬಿಡುಗಡೆಗೊಳಿಸಿದ್ದರು. ಸದರಿ ಹಣವನ್ನು ನಾವು ಯಾವುದೇ ತಕರಾರು ಇಲ್ಲದೇ ಪಡೆದುಕೊಂಡಿದ್ದೇವೆ ಎನ್ನುವುದು ಸರಿಯಲ್ಲ. ಆ ನಂತರ ನಾವು ಇ.ಎಸ್.ಐ ಇಲಾಖೆಯಿಂದ Unemployment compensation ಪಡೆದುಕೊಂಡಿದ್ದೇವೆ ಎನ್ನುವುದು ಸರಿಯಲ್ಲ.

ತಿರುಪತಿಯ ಕಾರ್ಮಿಕ ಇಲಾಖೆಯ ಡಿ.ಎಲ್.ಸಿ ಅವರಲ್ಲಿ 2 ನೇ ಪಕ್ಷಗಾರರ ಸಂಸ್ಥೆಯ ವಿರುದ್ಧ ನಾವು ದೂರು ಸಲ್ಲಿಸಿದ್ದು, ಅದರ ಅನ್ವಯ ದಿಃ 16.08.2018, 29.09.2018, 06.10.2018 ಮತ್ತು 12.10.2018 ರಂದು ನಮ್ಮನ್ನು ಸಮಾಲೋಚನೆಗೆ ಕರೆದಿದ್ದರು ಎನ್ನುವುದು ನಿಜ. ಸದರಿ ಸಮಾಲೋಚನೆಗೆ ನಾನು, ಸತೀಶ್, ಟಿ.ಎಸ್. ನಂದೀಶ್ ಮತ್ತು ರವಿ.ಎಸ್ ಮಾತ್ರ ಸಮಾಲೋಚನೆಗೆ ಭಾಗವಹಿಸುತ್ತಿದ್ದೇವು. ಸ್ಥಳೀಯ ಕಾರ್ಮಿಕರ ಸಂಘಟನೆಯ ಮುಖಂಡರು ನಮ್ಮೊಂದಿಗೆ ಭಾಗವಹಿಸುತ್ತಿದ್ದರು. ದಿಃ01.09.2018 ರಿಂದ 30.09.2018 ರ ಅವಧಿಗೆ ವೇತನವನ್ನು ಕೊಟ್ಟಿರುವುದಿಲ್ಲ

ಎಂದು ಕರ್ನೂಲ Joint Labour Commissioner ರವರಿಗೆ ದೂರು  ಸಲ್ಲಿಸಿದ್ದೇವೆ ಎನ್ನುವುದು ನಿಜ. ಸದರಿ ದೂರಿಗೆ 2 ನೇ ಪಕ್ಷಗಾರರ ಸಂಸ್ಥೆಯೂ ನಾವು ಕೆಲಸ ಮಾಡದೇ ಇರುವುದರಿಂದ ವೇತನ ಕೊಡಲು ಆಗುವುದಿಲ್ಲ ಎಂದು ತಕರಾರು ಸಲ್ಲಿಸಿದ್ದರು ಎಂದು ನನಗೆ ಗೊತ್ತಿಲ್ಲ. ದಿಃ06.06.2019 ರಂದು ಸಂಸ್ಥೆ ಮತ್ತೆ ನಾವು ಸದರಿ ಪ್ರಕರಣವನ್ನು ಇತ್ಯರ್ಥ ಮಾಡಿಕೊಳುತ್ತೇವೆ ಎಂದು  ತಿಳಿಸಿದ್ದರಿಂದ ಸದರಿ ಅರ್ಜಿಯನ್ನು ಮುಕ್ತಾಯಗೊಳಿಸಿದ್ದರು ಎಂದು ನನಗೆ ಗೊತ್ತಿಲ್ಲ. 2 ನೇ ಪಕ್ಷಗಾರರ ಸಂಸ್ಥೆ ವಿರುದ್ಧ ತಿರುಪತಿಯ ಕಾರ್ಮಿಕ ಇಲಾಖೆಯ ಡಿ.ಎಲ್.ಸಿ ಮತ್ತು Joint Labour Commissioner ರವರಲ್ಲಿ ಸಲ್ಲಿಸಿದ್ದ ಅರ್ಜಿಗಳು ಮುಕ್ತಾಯ ಆಗಿರುತ್ತವೋ ಅಥವಾ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಆದರೇ ಸಮಾಲೋಚನೆಗಳಿಗೆ ಹಾಜರಾಗಿರುತ್ತೇವೆ. ಸದರಿ ದೂರುಗಳು ಇಂದಿನವರೆಗೂ ಯಾವ ಹಂತದಲ್ಲಿ ಇವೇ ಎಂದು ನಾವು ತಿಳಿದುಕೊಂಡಿರುವುದಿಲ್ಲ. ಸದರಿ ಅರ್ಜಿಯೂ ಯಾವ ಹಂತದಲ್ಲಿ ಇದೆ ಎಂದು ನನಗೆ ಈಗ ಗೊತ್ತಿರುವುದಿಲ್ಲ. 2 ನೇ ಪಕ್ಷಗಾರರ ಸಂಸ್ಥೆಯ  ವಿರುದ್ಧ  ತಿರುಪತಿಯ ಕಾರ್ಮಿಕ ಇಲಾಖೆಯಲ್ಲಿ ಹಲವಾರು ಬೇಡಿಕೆಗಳಿಗೆ ಸಂಬಧಪಟ್ಟು ಮತ್ತು ನಮ್ಮನ್ನು retrenchment ಮಾಡಿದ ವ್ಯಾಜ್ಯಕ್ಕೆ ಸಂಬಂಧಪಟ್ಟು ದೂರುಗಳನ್ನು ದಾಖಲಿಸಿದ್ದೇವು ಎನ್ನುವುದಕ್ಕೆ ಸಾಕ್ಷಿಯೂ retrenchment ಮಾಡಿದ ವ್ಯಾಜ್ಯವನ್ನು ಸಲ್ಲಿಸಿರುವುದಿಲ್ಲ. ಉಳಿದ ವ್ಯಾಜ್ಯಗಳು ಯಾವ ಹಂತದಲ್ಲಿ ಇರುತ್ತವೆ ಎಂದು ನಾವು ತಿಳಿದುಕೊಂಡಿಲ್ಲ ಎಂದು ಹೇಳುತ್ತಾರೆ. ನಾವು ತಿರುಪತಿಯ ಕಾರ್ಮಿಕ ಇಲಾಖೆಯಲ್ಲಿ retrenchment ಗೆ ಸಂಬಂಧಪಟ್ಟಂತೆ ದೂರನ್ನು ಸಲ್ಲಿಸಿದ್ದು, ಆ ನಂತರದಲ್ಲಿ ನಾವು ಹಾಜರಾಗದೇ ಇದಿದ್ದರಿಂದ ಸದರಿ ಅರ್ಜಿ ವಜಾಗೊಂಡಿತ್ತು ಎನ್ನುವುದು ಸರಿಯಲ್ಲ. 2 ನೇ ಪಕ್ಷಗಾರರ ಸಂಸ್ಥೆಯೂ ನಮ್ಮನ್ನು ತಿರುಪತಿಯ ಯೂನಿಟ್‌ನಿಂದ retrenchment ಮಾಡಿ ಪರಿಹಾರವನ್ನು ಸದರಿ ಯೂನಿಟ್‌ನಿಂದಲೇ ಕೊಟ್ಟಿದ್ದಾರೆ ಎನ್ನುವುದು ಸರಿಯಲ್ಲ.

ನನ್ನ  ಮನೆಯ ವಿಳಾಸಕ್ಕೆ ಆಡಳಿತ ವರ್ಗದವರು  retrenchment ಆದೇಶ ಮತ್ತು ಪರಿಹಾರದ ಹಣವನ್ನು ಅಂಚೇ ಮೂಲಕ ಕಳುಹಿಸಿದ್ದು, ಅದನ್ನು ನಾನು ಸ್ವೀಕರಿಸಿದ್ದೆ ಎನ್ನುವುದು ನಿಜ.  ಸದರಿ ಅಂಚೇ ತಿರುಪತಿಯ 2 ನೇ ಪಕ್ಷಗಾರರ ಸಂಸ್ಥೆಯ ವಿಳಾಸದಿಂದ ಬಂದಿತ್ತು ಎನ್ನುವುದು ಸುಳ್ಳು.  ಸದರಿ  retrenchment ಆದೇಶ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.  ಆದರೇ  ಹಾಜರುಪಡಿಸುತ್ತೇನೆ. ದಿಃ01.06.2020 ರಂದು ನನ್ನನ್ನು retrenchment  ಮಾಡಿದನಂತರದಲ್ಲಿ ನನಗೆ ಬೇರೆ ಕಡೆ ಕೆಲಸ ಸಿಗದೇ ಇದಿದ್ದರಿಂದ ಕೆಲಸವನ್ನು ಮಾಡುತ್ತಿರುವುದಿಲ್ಲ.

Retrenchment ಮಾಡಿದ ಕಾರ್ಮಿಕರಲ್ಲಿ ಕೇಲವೊಂದು ಕಾರ್ಮಿಕರು ಹೆಚ್ಚಿನ ಪರಿಹಾರ ಕೇಳಿ 2 ನೇ ಪಕ್ಷಗಾರ ಸಂಸ್ಥೆಯನ್ನು ಬೇಟಿ ಮಾಡಿದ್ದರು ಎನ್ನುವುದು ಸುಳ್ಳು.

ನಾನು 1 ನೇ ಪಕ್ಷಗಾರ ಸಂಘಟನೆಯಲ್ಲಿ ಕಾರ್ಯಕಾರಿ ಸಮಿತಿ ಸದಸ್ಯನಾಗಿರುತ್ತೇನೆ. ಸದರಿ ಸಂಘಟನೆಯನ್ನು ತಿರುಪತಿಯಲ್ಲಿ ನೊಂದಣಿ ಮಾಡಿಸಿರುವುದಿಲ್ಲ. ಆದರೇ ಮೈಸೂರಿನಲ್ಲಿ ನೊಂದಣಿ ಮಾಡಿಸಿರುತ್ತೇವೆ. ನಮ್ಮ ಸಂಘವನ್ನು ಮೈಸೂರಿನಲ್ಲಿ ನೊಂದಣಿ ಮಾಡಿಸಿರುವುದರಿಂದ ಈ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿದ್ದೇವೆ ಎನ್ನುವುದಕ್ಕೆ ಸಾಕ್ಷಿಯೂ ನಮ್ಮನ್ನು ಮೈಸೂರಿನ ಸಂಸ್ಥೆಯೂ ಕೆಲಸದಿಂದ ತೆಗೆದಿರುವುದರಿಂದ ಈ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿರುತ್ತೇವೆ. ದಿಃ31.05.2020 ರ ನಂತರದಿಂದ ನಾನು 2 ನೇ ಪಕ್ಷಗಾರರ ಸಂಸ್ಥೆಯ ಮೈಸೂರಿನ ಮತ್ತು ತಿರುಪತಿಯ ಯೂನಿಟ್ ನಲ್ಲಿ ಕೆಲಸವನ್ನು ಮಾಡಿರುವುದಿಲ್ಲ ಎನ್ನುವುದು ನಿಜ. ಸಾಕ್ಷಿ ಹೇಳುತ್ತಾರೆ. ಕೋವಿಡ್ ಕಾರಣದಿಂದ ಕೆಲಸವನ್ನು ಮಾಡಿರುವುದಿಲ್ಲ. ಕೋವಿಡ್ ಅವಧಿಯ ನಂತರ ನಾನು ಹಾಗೂ ಉಳಿದ 1 ನೇ ಪಕ್ಷಗಾರರು ಮೈಸೂರು ಯೂನಿಟ್ ನಲ್ಲಿ ಕೆಲಸವನ್ನು ಮಾಡಿರುವುದಿಲ್ಲ ಎನ್ನುವುದು ನಿಜ. ಸಾಕ್ಷಿ ಹೇಳುತ್ತಾರೆ. ನಾವು ಕೆಲಸ ಕೊಡಲು ಕೇಳಿದರು 2 ನೇ ಪಕ್ಷಗಾರರ ಸಂಸ್ಥೆಯವರು ಕೆಲಸವನ್ನು ಕೊಟ್ಟಿರಲಿಲ್ಲ. ನಾವು ಮೈಸೂರು ಯೂನಿಟ್ ನ ಕಾರ್ಮಿಕರು ಆಗಿರದೇ ಇದಿದ್ದರಿಂದ ಮತ್ತು ದಿಃ31.05.2020 ರಂದು ನಮ್ಮನ್ನು ತಿರುಪತಿಯ ಯೂನಿಟ್ ನವರು ಕೆಲಸದಿಂದ ತೆಗೆದಿರುವುದರಿಂದ ಮೈಸೂರಿನ ಯೂನಿಟ್ ನವರು ನಮಗೆ ಕೆಲಸವನ್ನು ಕೊಟ್ಟಿಲ್ಲ ಎನ್ನುವುದು ಸರಿಯಲ್ಲ. ಆ ಕಾರಣಕ್ಕೆ ಈ ಪ್ರಕರಣವು 2 ನೇ ಪಕ್ಷಗಾರರ ಸಂಸ್ಥೆಗೆ ಬಾಧ್ಯಸ್ಥ ಆಗುವುದಿಲ್ಲ ಎನ್ನುವುದು ಸರಿಯಲ್ಲ. ನನ್ನ ಜೀವನ ನಿರ್ವಹಣೆಗೆ ಯಾವುದೇ ತೊಂದರೆ ಇಲ್ಲದೇ ಇದ್ದರು ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇವೆ ಎನ್ನುವುದು ಸರಿಯಲ್ಲ. 2 ನೇ ಪಕ್ಷಗಾರರ ಸಂಸ್ಥೆಯ ಆಡಳಿತ ವರ್ಗದ ಮೇಲಿನ ದ್ವೇಷದ ಕಾರಣಕ್ಕೆ ಅವರಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇವೆ ಎನ್ನುವುದು ಸರಿಯಲ್ಲ.

ಈ ಸಮಯದಲ್ಲಿ ಶ್ರೀ.ಜೆ.ಪಿ ಅವರು ಸಾಕ್ಷಿಯ ಮುಂದಿನ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು, ಆಲಿಸಿ ಮುಂದುಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

Sd/-

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**